(ಎ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಟ್ರಾನ್ಸ್ ಫಾರ್ಮರ್ ಗಳು ಸುಟ್ಟು ಹೋಗಿರುವುದರ ಬಗ್ಗೆ.

ಶ್ರೀ ಕೆ.ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೇ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಉಪಕರಣಗಳ ಅಭಾವದಿಂದ ಈ ತಾಲ್ಲೂಕು ಕತ್ತಲೆಯಲ್ಲಿದೆ. ಈಗ ರಾಜ್ಯದಲ್ಲಿ ಮಳೆಯು ಬಂದಿರುವುದರಿಂದ ವಿದ್ಯುತ್ ಉತ್ಪಾದನೆಯು ಆಶಾದಾಯಕವಾಗಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಸುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಟ್ರಾನ್ಸ್‌ಫರ್ಮಾರ್‌ಗಳು ಸುಟ್ಟು ಸುಮಾರು ಒಂದು ತಿಂಗಳಾದರೂ ಸಹಿತ ಅದನ್ನು ಬದಲಾವಣೆ ಮಾಡದೇ ಇರತಕ್ಕಂತಹ ಪ್ರಸಂಗಗಳನ್ನು ಕಾಣುತ್ತಿದ್ದೇವೆ. ಇದರ ಬಗ್ಗೆ ಕಳೆದ ಅಧಿವೇಶದ ಅವಧಿಯಲ್ಲಿ ನಿಯಮ 351ರ ಅಡಿಯಲ್ಲಿ ಪ್ರಸ್ತಾಪವನ್ನು ಮಾಡಿದ್ದೆ. ಆದರೆ ಅದಕ್ಕೆ ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ರಾಜ್ಯದಲ್ಲಿ 20,000 ಟ್ರಾನ್ಸ್ ಫಾರ್ಮರ್‌ಗಳು ಸುಟ್ಟು ಹೋಗುತ್ತಿದೆ ಎಂದು ಬಹುಶಃ ಮಾರ್ಚ್ ತಿಂಗಳಿನ ಟೈಮ್‌ನಲ್ಲಿ ವಿದ್ಯುತ್ ಅಭಾವದಿಂದ ಪವರ್ ಕಟ್ ಮಾಡಿದರೆ, ಮತ್ತು ಮಳೆಗಾಲದಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದರೆ, ಒಟ್ಟಾರೆ ಈ ಗ್ರಾಮಾಂತರ ಪ್ರದೇಶದಲ್ಲಿ ಪವರ್ ಇಲ್ಲದೇ ಕತ್ತಲೆಯಲ್ಲಿರತಕ್ಕಂತಹ ಪ್ರಸಂಗ ಉಂಟಾಗಿದೆ. ಆದ್ದರಿಂದ ಎಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿದೆ ಅದಕ್ಕೆ ತುರ್ತಾಗಿ ಹೊಸ ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತೇವೆ. ಮತ್ತೊಂದು ಮುಖ್ಯವಾದುದು ಎಂದರೆ ವಿದ್ಯುತ್ ಮೀಟರ್‌ಗಳ ಕೊರತೆ; ಕಂಬದ ಕೊರತೆ, ವೈರ್ ಕೊರತೆ, ಸಿಬ್ಬಂದಿ ಇಲ್ಲ, ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿ ಈ ವಿದ್ಯುಚ್ಛಕ್ತಿಯ ಇಲಾಖೆಯು ಇದೆ. ಅದನ್ನು ಸರಿಪಡಿಸತಕ್ಕಂತಹ ತುರ್ತು ಕ್ರಮವನ್ನು ಕೈಗೊಳ್ಳಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪೂರ್ (ಇಂಧನ ರಾಜ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಅಲ್ಲಿ ಎಲ್ಲೆಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿವೆ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಬೇಕು ಅವುಗಳನ್ನು ಸೋಮವಾರದಂದು ಅಥವಾ ಮಂಗಳವಾರದಂದು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆಂದು ತಮ್ಮ ಮೂಲಕ ತಿಳಿಸುತ್ತೇನೆ.

(ಏ) ಪಟ್ಟಣದ ಸದಸ್ಯರಿಗೆ ಮುನಿಸಿಪಾಲಿಟಿ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.

+ ಶ್ರೀ ಎಸ್.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೇ, ಶಾಸನ ಸಭೆಯ ಸದಸ್ಯರನ್ನು ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 11 (ಸಿ) ಪ್ರಕಾರ ಎರಡು ಭಾಗವನ್ನು ಮಾಡಿ ಹಳ್ಳಿಯಲ್ಲಿರುವ ಸದಸ್ಯರುಗಳು ಮುನಿಸಿಪಾಲಿಟಿ ಸಭೆಗಳಲ್ಲಿ ಭಾಗವಹಿಸಬಾರದು, ಅವರು ಅದೇ ಭಾಗದ ಎಲೆಕ್ಟೋರೇಟ್‌ನಲ್ಲಿದ್ದರೆ ಮಾತ್ರ